# 2ರಿಂದ ಡೆವಲಪ್‌ಮೆಂಟ್ ಡೈಲಾಗ್

**ಹುಬ್ಬಳ್ಳಿ:** ಫೆಬ್ರವರಿ 2 ಮತ್ತು 3 ರಂದು ದೇಶಪಾಂಡೆ ಫೌಂಡೇಶನ್ ವತಿಯಿಂದ ಬಿವಿಬಿ ಆವರಣದ ದೇಶಪಾಂಡೆ ಫೌಂಡೇಶನ್‌ನ ಸ್ಯಾಂಡ್‌ಬಾಕ್ಸ್‌ನಲ್ಲಿ 'ರಿಇಮ್ಯಾಜಿನಿಂಗ್ ಇಂಪ್ಯಾಕ್ಟ್' ಎಂಬ 'ಡೆವಲಪ್ ಮೆಂಟ್ ಡೈಲಾಗ್-2019' ಸಂವಾದ ನಡೆಯಲಿದೆ ಎಂದು ಫೌಂಡೇಶನ್ ಸಂಸ್ಥಾಪಕ ಗುರುರಾಜ ದೇಶಪಾಂಡೆ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃಷಿ ಮತ್ತು ಕೌಶಲ್ಯಭಿವೃದ್ಧಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪಾಲುದಾರಸಂಸ್ಥೆಗಳೊಂದಿಗೆಅಭ್ಯರ್ಥಿಗಳಸಂವಾದ ಕಾರ್ಯಕ್ರಮ, ಯುವ ಸಮ್ಮೇಳನ ಆರ್ಥಿಕ ಪ್ರಗತಿ, ಉದ್ಯಮಶೀಲತೆ ಕುರಿತು ತಳಮಟ್ಟದಿಂದ ಮಾಹಿತಿ ನೀಡುವ ಕಾರ್ಯಾಗಾರಗಳು ಎರಡು ದಿನಗಳ ಕಾಲ ನಡೆಯಲಿದೆ. ಭಾರತದ ವಿವಿಧೆಡೆಯಿಂದ 400ಕ್ಕೂ ಹೆಚ್ಚು ನವೋದ್ಯಮಿಗಳು ಕ್ರಿಯಾಶೀಲ ವ್ಯಕ್ತಿಗಳು ಪಾಲ್ಗೊಳ್ಳುವರು ಎಂದರು.

ಫೆ.2ರಂದು ಬೆಳಗ್ಗೆ 9.30ಕ್ಕೆ ನಡೆಯುವ ಕೌಶಲ ಪುನರ್‌ವಿನ್ಯಾಸ ಎಂಬ ವಿಷಯ ಗೋಷ್ಠಿಯಲ್ಲಿ ಗೆರಾಲ್ಡ್ ಚೇರತವಿನ್, ಆರ್‌ಸಿಎಂ ರೆಡ್ಡಿ, ರಾಧಾ ಬಸು, ಅಶೋಕ ಶೆಟ್ಟರ ಮಾತನಾಡಲಿದ್ದಾರೆ. ಮಧ್ಯಾಹ್ನ 12ಕ್ಕೆ ನಡೆಯುವ ಕೃಷಿ ಪುನರ್ ವಿನ್ಯಾಸ ಕುರಿತು ಲಲಿತೇಶ ಕಟ್ರಗಡ್ಡಾ, ಪ್ರೊ. ತ್ರಿಲೋಚನಾ ಶಾಸ್ತ್ರಿ, ಗಣೇಶ ನೀಲಂ, ಯೂನಸ್ ಖಾನ್ ಮಾತನಾಡುವರು ಎಂದರು. ಪಾಲುದಾರಿಕೆ ಪುನರ್‌ವಿನ್ಯಾಸ ಕುರಿತಾದ ಗೋಷ್ಠಿಯಲ್ಲಿ ಗ್ರಾಮೀಣಾಭಿವೃದ್ಧಿ ಸಚಿವ ಕೃಷ್ಣಬೈರೇಗೌಡ, ನಾರಾಯಣ ಮೂರ್ತಿ, ಟಿ.ಎಂ.ವಿಜಯಭಾಸ್ಕರ್, ಪ್ರದೀಪ ನಾಯರ್, ಪರೇಶ ಎಸ್. ಪರಸ್ನಿಸ್ ವಿಷಯ ಮಂಡಿಸುವರು ಎಂದರು.

ಮಧ್ಯಾಹ್ನ 3.30ಕ್ಕೆ ನಡೆಯುವ ತಂತ್ರಜ್ಞಾನ, ವಿನ್ಯಾಸದ ವಿವಿಧ ಮಾದರಿ, ಸಂಘಟನೆ ಯಶಸ್ಸಿನ ಕುರಿತು ಅಗಸ್ತ್ಯ ಫೌಂಡೇಶನ್ ಕೆ. ತ್ಯಾಗರಾಜನ್, ಶ್ರೀಧರ ವೆಂಕಟ್, ಐಎಲ್‌ಎಫ್‌ಎಸ್ ನಿರ್ದೇಶಕ ಆರ್‌ಸಿಎಂ ರೆಡ್ಡಿ, ಪ್ರೇಮಾ ಗೋಪಾಲನ, ಪಂಕಜಾ ಜೈನ್, ನಿತೀನ ಪಂಡಿತ್, ಹರೀಶ ಹ್ಯಾಂಡೆ, ಶಂಶಾಂಕ ಪಾಂಡೆ ಸೇರಿದಂತೆ ಅನೇಕರು ಸಾಧಕರು ಮಾತನಾಡಲಿದ್ದಾರೆ. ನಂತರ ಪ್ರಶ್ನೋತ್ತರ ನಡೆಯಲಿದೆ ಎಂದರು.

ಸಂಜೆ 6.30ಕ್ಕೆ ಯುನಿಂಗ್ ವಿಥ್ ಲೆಜೆಂಡ್ ಕಾರ್ಯಕ್ರಮದಲ್ಲಿ ಪ್ರಾಯೋಗಿಕವಾಗಿ ಸಾಧನೆಗೈದ ಉನ್ನತ ಸ್ಥಾನಕ್ಕೇರಿದ ಅನೇಕರು ತಮ್ಮ ಅಭಿಪ್ರಾಯ ಹಂಚಿಕೊಳ್ಳಲಿದ್ದಾರೆ ಎಂದರು.

ಫೆ. 3ರಂದು ಬೆಳಗ್ಗೆ ಕಾರ್ಪೋರೇಟ್ ವಲಯದ ಸಾಮಾಜಿಕ ಜವಾಬ್ದಾರಿ ಮತ್ತು ಸರಕಾರ ಜವಾಬ್ದಾರಿಗಳ ಕುರಿತು ಚಿಂತನ ಮಂಥನ ನಡೆಯಲಿದೆ. ಈ ವೇಳೆ ಐಐಸಿಎ ಡಿಜಿ ಮತ್ತು ಸಿಇಒ ಡಾ ಸಮೀರಾ ಶರ್ಮಾ, ಮಯೂರಿ ಮಿಶ್ರಾ, ಎಚ್ ಸಿಎಲ್ ಫೌಂಡೇಶನ್‌ನ ನಿಧಿ ಪಂಡಿತ್, ಡಾ. ಶಾಲಿನಿ ಸರೀನ, ನಮಿತಾ ವಿಕಾಸ ಸೇರಿದಂತೆ ಇತರರು ಮಾತನಾಡುವರು. 11.30ಕ್ಕೆ ನಡೆಯುವ ಸಂಘ ಸಂಸ್ಥೆಗಳ ಸಾಮಾಜಿಕ ಜವಾಬ್ದಾರಿ ಮತ್ತು ಅವುಗಳ ಅಧ್ಯಯನ ಶೀಲತೆ ಬಗೆಗಿನ ಸಂವಾದಲ್ಲಿ ಸ್ವದೇಶ ಫೌಂಡೇಶನ್ ಮಂಗೇಶ ವಾಂಘೆ, ವೈ. ಸುರೇಶ ರೆಡ್ಡಿ, ಅಭಿಷೇಕ ರಂಜನ್, ಸೌಮ್ಯಾ ಸೂರ್ಯನಾರಾಯಣ ಮಾತನಾಡಲಿದ್ದು, ಮನೋಜ ಚಕ್ರವರ್ತಿ ಈ ಸಂವಾದವನ್ನು ನಿರ್ವಹಿಸುವರು. ನಂತರ ಸಂಜೆ 4.30ರವರೆಗೆ ವಿವಿಧ ವಿಷಯಗಳ ಬಗ್ಗೆ ಸಂವಾದ ನಡೆಯಲಿದ್ದು, ಅನೇಕ ತಜ್ಞರು ತಮ್ಮ ಅಭಿಪ್ರಾಯಗಳ ಕುರಿತು ಚರ್ಚಿಸಲಿದ್ದಾರೆ ಎಂದು ತಿಳಿಸಿದರು.

ಎರಡು ದಿನದ ಈ ಡೆವಲಪ್‌ಮೆಂಟ್ ಡೈಲಾಗ್ ನಲ್ಲಿ ಇನ್‌ಫೋಸಿಸ್ ಸಂಸ್ಥಾಪಕ ನಾರಾಯಣ ಮೂರ್ತಿ, ಸೆಲ್ಕೋ ಸಂಸ್ಥಾಪಕ ಹರೀಶ ಹ್ಯಾಂಡೆ, ಸ್ವಾಮಿ ಶಿಖಾನ್ ಪ್ರಯಾಗ್ ಸಂಸ್ಥಾಪಕ ಪ್ರೇಮಾ ಗೋಪಾಲನ್, ಐಐಎಂ ಬೆಂಗಳೂರು ಸುನೀಲ್ ವಚನಿ, ಸಮಗ್ರಾ ಸಂಸ್ಥಾಪಕ ಗೌರವ ಗೋಯೆಲ್ ಸೇರಿದಂತೆ ದೇಶ-ವಿದೇಶಗಳ ತಜ್ಞರು ಮತ್ತು ಸಾಧಕರು ಮಾತನಾಡಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ದೇಶಪಾಂಡೆ ಫೌಂಡೇಶನ್ ಸಿಇಒ ವಿವೇಕ ಪವಾರ, ಜಯಶ್ರೀ ದೇಶಪಾಂಡೆ ಸೇರಿದಂತೆ ಇತರರು ಇದ್ದರು.